ಕವಿತೆ

ಪೂರ್ಣಿಮಾ ಸುರೇಶ್

ಕಲೆ: ಬಸವರಾಜ ಕಲೆಗಾರ



# ಲಾಲಿ

ಅದೆಷ್ಟು ಸಲ ಮಳೆಯಾಗಿಲ್ಲ
ಇಳಿಸಂಜೆ ಇನಿಹನಿ
ಒದ್ದೆ ಒದ್ದೆ ಇಳೆ ಸೊಂಪು

ಮಾಮಳೆ..
ಸಿಡಿಲು ಗುಡುಗುಡು
ಪುಟ ಮಗುಚಿ ಪಸೆ ಹಸೆ ಕಪ್ಪು
ಕತ್ತಲೆ ತಡ ತಡವಿ
ತಡವರಿಸುವ ಜೀವ
ಗಾಢ ವಿಷಾದ ಕೋಕಿಲಸ್ವನ

ಹರಿ ನೀರು
ಅದು ತೊರೆಯೋ
ನದಿಯೋ ಕಡಲೋ
ತಿಳಿಯುವುದು ಕಲೆಯೋ

ಈಗ ಮೋಡಗಳು ಸರಿದಿವೆ
ಕರಿಸುಳಿ ಹರಿದಿವೆ
ಬಿದ್ದ ಬಿಳಿ ರಶ್ಮಿಕಾಂತಿ
ಹುಳುಕುಗಳ ಸುಡುತ್ತಿವೆ

ಜಾರುವ ಬಿಂದು ಬಿಂದು
ಹಕ್ಕಿಯ ರೆಕ್ಕೆಪುಕ್ಕ ಹಗುರಾಗಿ
ಗೂಡು ಬಿಟ್ಟು
ಎಲ್ಲೆ ಮೀರಲು ಹಾರುತ್ತಿದೆ
ಕೆರೆಯ ಸೆಲೆ ಅಲೆ
ದಡದ ಮರ ಬಿಟ್ಟ ಒಣ ಎಲೆಯ
ಆಚೆ ದಂಡೆಗೆ ದೂಡುತ್ತಿದೆ

ಮಾತುಗಳು ಮಾತಿಗೆ ಒದಗದು
ಆತ್ಮದ ನಗ್ನತೆಯೆದುರು
ಹಣೆ ಇಕ್ಕಿದೆ
ಕತ್ತಲಿನ ಒಂದು ಪ್ರತಿ

ಇದೀಗ..
ಅಮ್ಮನ ಲಾಲಿ ಮಾತ್ರ
ನಿಜ ಕವಿತೆ